# ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 405

ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಸಂಚರಿಸುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು; ಇವುಗಳ ನಿರ್ವಹಣೆಗಾಗಿ ಖರ್ಚಾಗುತ್ತಿರುವ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ 6199 ಬಸ್‌ಗಳು ಸಂಚರಿಸುತ್ತಿದ್ದು, ಸದರಿ ಬಸ್‌ಗಳ ನಿರ್ವಹಣೆಗಾಗಿ 2024-25ನೇ ವರ್ಷದಲ್ಲಿ ರೂ.8350.53 ಲಕ್ಷ ಖರ್ಚಾಗಿರುತ್ತದೆ. |
| ಆ) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಸಂಚರಿಸುವ ಬಸ್ಸುಗಳಿಗೆ ಸರ್ಕಾರದ ಜಾಹೀರಾತು ಹೊರತುಪಡಿಸಿ ಖಾಸಗಿ ಜಾಹೀರಾತುಗಳನ್ನು ಬಸ್ಸುಗಳಿಗೆ ಅಳವಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳಿಗೆ ಯಾವ ನಿಯಮದಡಿಯಲ್ಲಿ ಅವಕಾಶ ನೀಡಲಾಗಿದೆ; | ಹೌದು, ಗಮನಕ್ಕೆ ಬಂದಿದೆ.<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಆದಾಯ ವೃದ್ಧಿಸುವ ದೃಷ್ಟಿಯಿಂದ ಬಸ್‌ಗಳಿಗೆ ಖಾಸಗಿ ಜಾಹೀರಾತು ಅಳವಡಿಸಲು KTPP ನಿಯಮಗಳನ್ವಯ ಸಂಸ್ಥೆಯಿಂದ ಟೆಂಡರ್ ಆಹ್ವಾನಿಸಿ ಟೆಂಡರ್ ನಿಯಮಾವಳಿಯಂತೆ ಮೇ॥ಸಾಯಿ ಅಡ್ವರ್ಟೈಸರ್ ಹಾಗೂ ಮೇ॥ಸೈನ್ ಪೋಸ್ಟ್ ರವರಿಗೆ ಅವಕಾಶ ನೀಡಲಾಗಿದೆ. |
| ಇ) | ಖಾಸಗಿ ಜಾಹೀರಾತುಗಳನ್ನು ಬಸ್ಸುಗಳ ಮೇಲೆ ಅಳವಡಿಸಲು ಸರ್ಕಾರವು ನಿಗದಿಪಡಿಸಿದ ಮೊತ್ತ ಎಷ್ಟು; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು ಹಾಗೂ ಜಾಹೀರಾತುಗಳಿಂದ ಬಂದ ಒಟ್ಟು ಹಣ ಎಷ್ಟು ಹಾಗೂ ಈ ಹಣವನ್ನು ಸರ್ಕಾರವು ಯಾವುದಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂಬುದರ ಸಂಪೂರ್ಣ ಮಾಹಿತಿ ನೀಡುವುದು; | ಸಂಸ್ಥೆಯ 3000 ಬಸ್ಸುಗಳಲ್ಲಿ ಜಾಹೀರಾತು ಅಳವಡಿಸಿ ಪ್ರದರ್ಶಿಸಲು KTPP ಪೋರ್ಟಲ್ ನಲ್ಲಿ ಟೆಂಡರ್‌ನಲ್ಲಿ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.12500/- ಗಳನ್ನು ನಿಗದಿಪಡಿಸಲಾಗಿತ್ತು.<br>ಮೇ.ಸಾಯಿ ಅಡ್ವರ್ಟೈಸರ್ ಇವರು 3000 ಸಾಮಾನ್ಯ ಬಸ್ಸುಗಳಲ್ಲಿ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.12616/- (ತೆರಿಗೆ ಹೊರತುಪಡಿಸಿ) ಬಿಡ್ ಮಾಡಿ ಜಾಹೀರಾತು ಅಳವಡಿಸಿ ಪ್ರದರ್ಶಿಸಲು ಆಯ್ಕೆಯಾಗಿರುತ್ತಾರೆ,<br>ಸಂಸ್ಥೆಯ 400 ಬಸ್ಸುಗಳಲ್ಲಿ ಜಾಹಿರಾತು ಅಳವಡಿಸಲು KTPP ಪೋರ್ಟಲ್ ನಲ್ಲಿ ಟೆಂಡರ್‌ನಲ್ಲಿ ಪ್ರತಿ ಬಸ್ಸಿಗೆ ಪ್ರತಿ ಮಾಹೆಗೆ ರೂ.25000/- ಗಳನ್ನು ನಿಗದಿಪಡಿಸಲಾಗಿತ್ತು. ಆದರೆ, ಮೇ.ಸೈನ್ ಪೋಸ್ಟ್ ಇವರು 400 ವೋಲ್ವೋ ಬಸ್ಸುಗಳಲ್ಲಿ ಜಾಹೀರಾತಿಗೆ ಪ್ರತಿ |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಮಾಹೆಗೆ ಪ್ರತಿ ಬಸ್ಸಿಗೆ ರೂ.25255/- (ತೆರಿಗೆ ಹೊರತುಪಡಿಸಿ) ಬಿಡ್ ಮಾಡಿ ಜಾಹೀರಾತು ಅಳವಡಿಸಿ ಪ್ರದರ್ಶಿಸಲು ಆಯ್ಕೆಯಾಗಿರುತ್ತಾರೆ. ಇದರಿಂದ ಪ್ರತಿ ಮಾಹೆಗೆ ಸರಾಸರಿ ಒಟ್ಟು ರೂ.4,64,11,689/- ಆದಾಯ ಗಳಿಸಲಾಗುತ್ತಿದೆ.<br>2024-25ನೇ ಸಾಲಿನಲ್ಲಿ ಜಾಹೀರಾತುಗಳಿಂದ ಸಂಸ್ಥೆಗೆ ಒಟ್ಟು ರೂ.2515.45 ಲಕ್ಷಗಳನ್ನು ಗಳಿಸಿದ್ದು, ಸದರಿ ಮೊತ್ತವನ್ನು ನೌಕರರ ವೇತನ, ಇಂಧನ ಹಾಗೂ ಇತರೇ ವೆಚ್ಚಗಳಿಗೆ ಬಳಸಿಕೊಳ್ಳಲಾಗಿದೆ.</td></tr>
<tr><td>ಈ)</td><td>ಬೆಂಗಳೂರಿನಲ್ಲಿ ಸಂಚರಿಸುವ ಬಸ್ಸುಗಳ ಮೇಲೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಎಂಬ ಹೆಸರು ಕಾಣಿಸಿದ ಹಾಗೆ ಜಾಹೀರಾತು ನೀಡಲಾಗಿದೆಯೇ; ಹಾಗಿದ್ದಲ್ಲಿ, ನಮ್ಮ ಸಂಸ್ಥೆಯ ಹೆಸರುಗಳನ್ನು ನಾವೇ ಮುಚ್ಚಿದ ಹಾಗೇ ಆಗುವುದಿಲ್ಲವೇ; ಈ ಕುರಿತು ಸರ್ಕಾರದ ಕ್ರಮಗಳೇನು;</td><td>ಸಂಸ್ಥೆಯ ಬಸ್‌ಗಳ ಮೇಲೆ ಜಾಹೀರಾತು ಅಳವಡಿಸಿ ಪ್ರದರ್ಶಿಸಲು ಪರವಾನಗಿಯನ್ನು ನೀಡಲಾಗಿದ್ದು, ಸದರಿ ಪರವಾನಗಿದಾರಿಗೆ ನಿಯಮಾವಳಿ ಅನ್ವಯ ಜಾಹೀರಾತುಗಳಲ್ಲಿ ಸಂಸ್ಥೆಯ ಹೆಸರು ಮುದ್ರಿಸಿ ಅಳವಡಿಸಲು ಸೂಚಿಸಲಾಗಿರುತ್ತದೆ. ಸಂಸ್ಥೆಯ ಹೆಸರನ್ನು ಬಸ್ಸುಗಳ ಮೇಲೆ ಮುದ್ರಿಸದೆ ಜಾಹೀರಾತು ಪ್ರದರ್ಶಿಸಿದ ಪ್ರಕರಣಗಳಲ್ಲಿ ಕರಾರಿನ ನಿಯಮಾವಳಿಯಂತೆ ಕ್ರಮ ಕೈಗೂಳ್ಳಲಾಗುತ್ತದೆ.</td></tr>
<tr><td>ಉ)</td><td>ಕಳೆದ 03 ವರ್ಷಗಳಲ್ಲಿ ಜಾಹೀರಾತುಗಳನ್ನು ಅಳವಡಿಸಲು ಯಾವ-ಯಾವ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ? (ಕಂಪನಿವಾರು/ಜಾಹೀರಾತುವಾರು ನೀಡಿದ ದಿನಾಂಕ/ಮೊತ್ತ ಹಾಗೂ ಇನ್ನಿೀತರ ಅಗತ್ಯವಾದ ಸಂಪೂರ್ಣ ಮಾಹಿತಿ ನೀಡುವುದು)</td><td>ಕಳೆದ 03 ವರ್ಷಗಳಲ್ಲಿ ಜಾಹೀರಾತುಗಳನ್ನು ಅಳವಡಿಸಲು ಗುತ್ತಿಗೆ ನೀಡಲಾದ ಕಂಪನಿಗಳ ವಿವರ
<table>
<tr><th>ಕ್ರ.ಸ</th><th>ಪರವಾನಗಿದಾರರ ಹೆಸರು</th><th>ಅವಧಿ</th><th>ಒಟ್ಟು ವಾಹನಗಳು</th><th>ಪ್ರತಿ ಮಾಹೆಗೆ ಪ್ರತಿ ಬಸ್ಸಿಗೆ (ರೂ.ಗಳಲ್ಲಿ)</th><th>ಪ್ರತಿ ಮಾಹೆಗೆ ಪರವಾನಗಿ ಶುಲ್ಕ (ರೂ.ಗಳಲ್ಲಿ)</th></tr>
<tr><td>1</td><td>ಮೇ||ಸಾಯಿ ಅಡ್ವರ್ಟೈಸರ್</td><td>2025-2029</td><td>3000</td><td>12616/-</td><td>3,78,48,000/-</td></tr>
<tr><td>2</td><td>ಮೇ||ಸೈನ್ ಪೋಸ್ಟ್</td><td>2025-2028</td><td>400</td><td>25255/-</td><td>1,01,02,000/-</td></tr>
</table></td></tr>
</table>

ಸಂಖ್ಯೆ: ಟಿಡಿ 148 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು